ಸಾಕ್ಷಿಯನ್ನು ದಿಃ **31.03.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಪಿ ಎಸ್ ವಕೀಲರಿಂದಃ

ಪ್ರತಿವಾದಿ ಬರೆದುಕೊಟ್ಟಿರುವ ಆನ್ ಡಿಮಾಂಡ್ ಪ್ರನೋಟನ್ನು ಯಾವಾಗ ಬರೆದುಕೊಟ್ಟಿರುತ್ತಾರೆ ಎಂದು ನೆನಪಿಲ್ಲ. ಆ ದಿನ ಪ್ರತಿವಾದಿಗೆ ವಾದಿ ಯಾವ ಮುಖ ಬೆಲೆಯ ನಗದನ್ನು ನೀಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಪ್ರನೋಟು ಬರೆದುಕೊಡುವ ಪೂರ್ವದಲ್ಲಿ ಹಣದ ವ್ಯವಹಾರದ ವಿಚಾರವಾಗಿ ಮಾತುಕತೆ ಎಲ್ಲಿ ನಡೆದಿತ್ತು ಎಂದು ನನಗೆ ಗೊತ್ತಿಲ್ಲ. ಯಾವ ವಿಚಾರಕ್ಕಾಗಿ ಪ್ರತಿವಾದಿ ಸಾಲ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರನೋಟನ್ನು ಎಲ್ಲಿ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರನೋಟನ್ನು ಪ್ರತಿವಾದಿ ಚಿಕ್ಕೇಗೌಡ ಬರೆದುಕೊಟ್ಟಿರುತ್ತಾರೆ. ಅವರ ತಂದೆ ಹೆಸರು ನನಗೆ ಗೊತ್ತಿಲ್ಲ. ಸದರಿ ಚಿಕ್ಕೇಗೌಡ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಪ್ರನೋಟಿನ ಬಿಕ್ಲಂದಾರರ ಹೆಸರು ಶ್ರೀಕಂಠ. ಚಿಕ್ಕೇಗೌಡರು ನಮ್ಮ ಮುಂದೆ ಪ್ರನೋಟಿಗೆ ಸಹಿ ಮಾಡಿರುತ್ತಾರೆ. ನನ್ನನ್ನು ಪತ್ರ ಸಹಿ ಮಾಡಲು ಹೇಳಿರುತ್ತಾರೆ ಆದ್ದರಿಂದ ಸಹಿ ಮಾಡಿರುತ್ತೇನೆ. ನಮ್ಮ ಮುಂದೆ 2 ಲಕ್ಷ ರೂಪಾಯಿಯನ್ನು ಪ್ರತಿವಾದಿಗೆ ವಾದಿ ಕೊಟ್ಟಿರುತ್ತಾರೆ. ನನ್ನ ಮುಂದೆ ದುಡ್ಡನ್ನು ಕೊಟ್ಟಿರುವುದಿಲ್ಲ ಆದ್ದರಿಂದ ಯಾವ ಮುಖ ಬೆಲೆಯ ನಗದು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಿಕ್ಕಯ್ಯ ರವರು ಕೆ ಇ ಬಿ ಕೆಲಸದಲ್ಲಿ ಇದ್ದರು ಎಂಬ ವಿಚಾರ ನನಗೆ ಗೊತ್ತಿಲ್ಲ. ಸದರಿ ಚಿಕ್ಕಯ್ಯ ರವರಿಗೆ ಒಳ್ಳೆ ವೇತನ ಬರುತ್ತಿತ್ತು ಅವರ ಎಲ್ಲಾ ಮಕ್ಕಳಿಗೂ ಅವರೇ ಮದುವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಚಿಕ್ಕಯ್ಯ ರವರಿಗೆ ಬರುವ ಸಂಬಳ ಸಾಕಾಗಿತ್ತು ಆದ್ದರಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ನಾನು ಮತ್ತು ಮಹೇಶ

ಮನ್ನೇಹುಂಡಿ ಗ್ರಾಮಕ್ಕೆ ಸೇರಿದವರು. ವಾದಿ ಮತ್ತು ನಾನು ಮತ್ತು ಮಹೇಶ ಮೂರು ಜನ ಸೇರಿ ನಿಪಿ.1 ರ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ನಮ್ಮ ಊರಿನವರಾದ ಕಾರಣ ಅವರ ಪರವಾಗಿ ಸುಳ್ಳುಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಿಕ್ಕೇಗೌಡ ನಮ್ಮ ಮುಂದೆ ಒಂದೇ ಹೆಬ್ಬೆಟ್ಟು ಹಾಕಿರುತ್ತಾರೆ. ಸದರಿ ಚಿಕ್ಕಯ್ಯ ರವರು ವಿದ್ಯಾವಂತರು ಆದ್ದರಿಂದ ಹೆಬ್ಬೆಟ್ಟು ಹಾಕುವ ಸಂದರ್ಭ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರು ಕೆ ಇ ಬಿ ನೌಕರರಾಗಿದ್ದರಿಂದ ಅವರು ಯಾವಾಗಲೂ ಸಹಿ ಮಾಡುತ್ತಾರೆ ಹೆಬ್ಬೆಟ್ಟು ಹಾಕುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ